ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಎ.ಹೆಚ್.ಎಂ.ಸಿ ಎರಡನೇ ಗೇಟ್ ಮುಂಭಾಗ
ಮೊದಲನೇ ಮಹಡಿ, ಜಿ.ಪಿ.ಆರ್ ಬಿಲ್ಡಿಂಗ್,
ಎಂ.ಜಿ. ರಸ್ತೆ, ಚಿಕಬಳ್ಳಾಪುರ-562101

ಕರ್ನಾಟಕ ಸರ್ಕಾರ

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಬಳ್ಳಾಪುರ.

:ವಾಣಿಜ್ಯ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ:

ಸಂಖ್ಯೆ:ಚಿ.ನ.ಅ.ಪ್ರಾ/ವಿನ್ಯಾಸ/02/2022-23 1420 **ದಿನಾಂಕ:** 23 NOV 2022

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಚೆಲುವತಿಮ್ಮನಹಳ್ಳಿ ಗ್ರಾಮದ ಸ.ನಂ.65/13 ರಲ್ಲಿ 0ಎಕರೆ-05ಗುಂಟೆ ಹಾಗೂ ಸ.ನಂ.65/14 ರಲ್ಲಿ 0ಎಕರೆ-05ಗುಂಟೆ **ಒಟ್ಟು 0ಎಕರೆ-10ಗುಂಟೆ** ವಿಸ್ತೀರ್ಣದ ಜಮೀನಿಗೆ ವಾಣಿಜ್ಯ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ವಿಜಯ ಕುಮಾರ್.ಜಿ.ಎಂ ಬಿನ್ ಜಿ.ಮುನಿರತ್ನಂ ರವರ ಮನವಿ ದಿನಾಂಕ:31.03.2022.
2. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಅಧಿಕೃತ ಜ್ಞಾಪನ ಅರ್ಜಿ ಸಂಖ್ಯೆ:299118 ದಿನಾಂಕ:14.03.2022 ಹಾಗೂ 299117 ದಿನಾಂಕ:18.03.2022.
3. ದಿನಾಂಕ:19.07.2022 ರಂದು ನಡೆದ ಪ್ರಾಧಿಕಾರದ 26ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:03 ರ ನಿರ್ಣಯ.
4. ಅರ್ಜಿದಾರರು ಶುಲ್ಕ ಪಾವತಿಸಿರುವ ದಿನಾಂಕ:07.09.2022 ಹಾಗೂ ಪ್ರಾಧಿಕಾರದ ರಶೀದಿ ಸಂಖ್ಯೆ:209 ದಿನಾಂಕ:07.09.2022.

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಬಳ್ಳಾಪುರ

--*

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಪತ್ರದಲ್ಲಿ ಶ್ರೀ ವಿಜಯ ಕುಮಾರ್.ಜಿ.ಎಂ ಬಿನ್ ಜಿ.ಮುನಿರತ್ನಂ ಇವರು ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಚೆಲುವತಿಮ್ಮನಹಳ್ಳಿ ಗ್ರಾಮದ ಸ.ನಂ.65/13 ರಲ್ಲಿ 0ಎಕರೆ-05ಗುಂಟೆ ಹಾಗೂ ಸ.ನಂ.65/14 ರಲ್ಲಿ 0ಎಕರೆ-05ಗುಂಟೆ **ಒಟ್ಟು 0ಎಕರೆ-10ಗುಂಟೆ** ವಿಸ್ತೀರ್ಣದ ಜಮೀನಿಗೆ ವಾಣಿಜ್ಯ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಿರುತ್ತಾರೆ.

ಪ್ರಸ್ತಾವಿತ ಜಮೀನನ್ನು ಉಲ್ಲೇಖ(2) ರಂತೆ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ವಾಣಿಜ್ಯ ಉದ್ದೇಶಕ್ಕಾಗಿ ಭೂಪರಿವರ್ತಿಸಿ ಅಧಿಕೃತ ಜ್ಞಾಪನ ಪತ್ರ ಹೊರಡಿಸಿದ್ದು, ಉಲ್ಲೇಖ(3) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ 10 ಗುಂಟೆವರೆಗಿನ ಏಕನಿವೇಶನ ವಿನ್ಯಾಸ ನಕ್ಷೆಗಳಿಗೆ ಅನುಮೋದನೆ ನೀಡಲು ಆಯುಕ್ತರವರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.

ಅದರಂತೆ ಅರ್ಜಿದಾರರು ಉಲ್ಲೇಖ(4) ರಲ್ಲಿ ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ದಿನಾಂಕ:07.09.2022 ರಂದು ಡಿ.ಡಿಗಳ ಮೂಲಕ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಮುಂದುವರೆದು ವಲಯ ನಿಯಾವಳಿಯನ್ವಯ ವಾಣಿಜ್ಯ ಉದ್ದೇಶಕ್ಕೆ ಏಕನಿವೇಶನ ನಕ್ಷೆಯನ್ನು ತಯಾರಿಸಲಾಗಿ ಭೂ-ಉಪಯೋಗ ವಿಶ್ಲೇಷಣೆ ಈ ಕೆಳಕಂಡಂತಿದೆ.

ಕ್ರ.ಸಂ.	ಭೂ-ಉಪಯೋಗ	ವಿಸ್ತೀರ್ಣ(ಚ.ಮೀ)	ಶೇಕಡ%
01.	ವಾಣಿಜ್ಯ	804.32	79.50
02.	ಉದ್ಯಾನವನ	101.57	10.04
03	ವಾಹನ ನಿಲುಗಡೆ	50.61	05.00
04.	ರಸ್ತೆ	55.20	05.46
	ಒಟ್ಟು	**1011.70**	**100.00**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 17 ರಡಿ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ(32) ರಡಿಯಲ್ಲಿ ವಾಣಿಜ್ಯ ಏಕನಿವೇಶನ ವಿನ್ಯಾಸ ನಕ್ಷೆಗೆ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ.

ಷರತ್ತುಗಳು:

1. **ವಾಹನ ನಿಲುಗಡೆಗಾಗಿ ಮತ್ತು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಜಾಗವನ್ನು ಜಮೀನಿನ ಮಾಲೀಕರೇ ಸದರಿ ಉದ್ದೇಶಕ್ಕಾಗಿಯೇ ಕಾಯ್ದಿರಿಸಿ ಅಭಿವೃದ್ಧಿಪಡಿಸಿ ಉಪಯೋಗಿಸಿಕೊಳ್ಳತಕ್ಕದ್ದು ಹಾಗೂ ಬೇರೆ ಉದ್ದೇಶಕ್ಕಾಗಿ ಈ ಜಾಗವನ್ನು ಉಪಯೋಗಿಸುವಂತಿಲ್ಲ.**
2. ಪ್ರಸ್ತಾವಿತ ಪ್ರದೇಶವನ್ನು ವಾಣಿಜ್ಯ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದಿಸಲಾಗಿದ್ದು, ಈ ನಿವೇಶನವನ್ನು ಉಪವಿಭಾಗ ಮಾಡುವುದಾಗಲಿ, ನಿವೇಶನ ಅಳತೆಯನ್ನು ಮಾರ್ಪಾಡು ಮಾಡುವುದಾಗಲಿ ಮಾಡಕೂಡದು. ಒಂದು ವೇಳೆ ನಿವೇಶನವನ್ನು ಉಪವಿಭಜಿಸಬೇಕಾಗಿದ್ದಲ್ಲಿ ವಲಯ ನಿಯಮಾವಳಿಯನ್ವಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 17 ರಂತೆ ಪ್ರಾಧಿಕಾರದ ಪೂರ್ವಾನುಮತಿ ಪಡೆಯತಕ್ಕದ್ದು.
3. ಪ್ರಸ್ತಾವಿತ ವಿನ್ಯಾಸದಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವ ಮುನ್ನ ನಿಯಮಾನುಸಾರ ಅಗತ್ಯ ಶುಲ್ಕವನ್ನು ಪಾವತಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಗಲಗುರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ಇವರಿಂದ ಖಾತೆ ದಾಖಲು ಮಾಡಿಸಿಕೊಳ್ಳತಕ್ಕದ್ದು.
4. ವಾಣಿಜ್ಯ ಏಕನಿವೇಶನ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
5. ವಿನ್ಯಾಸದಲ್ಲಿ ಕಟ್ಟಡ ನಿರ್ಮಾಣ ಪ್ರಾರಂಭಿಸುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರಂತೆ ತಾಂತ್ರಿಕ ಅಭಿಪ್ರಾಯ ಪಡೆಯತಕ್ಕದ್ದು.
6. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
7. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು.
8. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂ-ಮಾಲಿಕತ್ವ ದಾಖಲೆಗಳು, ಸರ್ವೆ ನಕ್ಷೆ ಮತ್ತು ಖರಾಬು ಜಾಗೆಗಳ ಬಗ್ಗೆ ಮಾಹಿತಿ/ದಾಖಲೆ ಮತ್ತು ಇತರೆ ದಾಖಲೆ ಅಥವಾ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನಾಗಿ ರದ್ದುಗೊಳ್ಳುತ್ತದೆ ಮತ್ತು ಸಂಬಂಧಿಸಿದವರ ವಿರುದ್ಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 17(4) ರಂತೆ ಕಾನೂನು ಕ್ರಮ ಜರುಗಿಸಲಾಗುವುದು ಹಾಗೂ ಒಟ್ಟಾರೆ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.
9. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
10. ವಿನ್ಯಾಸದಲ್ಲಿ ಕೊಳವೆ ಬಾವಿಗಳನ್ನು ತೆರೆಯುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು ಹಾಗೂ ತೆರೆದ ಕೊಳವೆ ಬಾವಿಯ ಬಗ್ಗೆ ಭೂ ಮಾಲೀಕರು ಹಾಗೂ ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ:30.01.2012 ಮತ್ತು ದಿನಾಂಕ:06.08.2014 ರಂದು ಸರ್ಕಾರ ನೀಡಿರುವ ನಿರ್ದೇಶನಗಳಂತೆ ತಪ್ಪದೆ ಕ್ರಮವಹಿಸತಕ್ಕದ್ದು.

--3

11. ಮೇಲೆ ತಿಳಿಸಿದ ವಿಧಿಸಿರುವ ಯಾವುದೇ ಷರತ್ತುಗಳನ್ನು ಉಲ್ಲಂಘಿಸುವುದಾಗಲಿ ಹಾಗೂ ಕಾಲಕಾಲಕ್ಕೆ ವಿಧಿಸುವ ಇತರೆ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.

12. ಈ ಅನುಮೋದಿತ ವಿನ್ಯಾಸ ನಕ್ಷೆಯು ನಿಗಧಿಪಡಿಸಲಾದ ಮಾಪನ (ಸ್ಕೇಲ್) ದಲ್ಲಿ ವ್ಯತ್ಯಾಸ ಇರುವುದು ಕಂಡುಬಂದಲ್ಲಿ ಅದನ್ನು ಸೂಕ್ತವಾಗಿ ಸ್ಥಳದ ವಸ್ತು-ಸ್ಥಿತಿ ಹಾಗೂ ಅಳತೆ ಪರಿಮಾಣಕ್ಕೆ ಅನುಗುಣವಾಗಿ ಪರಿಷ್ಕೃತ ವಿನ್ಯಾಸಕ್ಕೆ ಅನುಮೋದನೆ ಪಡೆದುಕೊಳ್ಳತಕ್ಕದ್ದು.

13. ವಿನ್ಯಾಸದಲ್ಲಿ ಲಘು ವಿದ್ಯುತ್ ವಾಹಕ ತಂತಿಗಳು ಹಾದು ಹೋಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಸೂಕ್ತ ಜಾಗಕ್ಕೆ ಅಥವಾ ರಸ್ತೆ ಬದಿಗೆ ಸ್ಥಳಾಂತರಿಸತಕ್ಕದ್ದು ಹಾಗೂ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಈ ಕಛೇರಿಗೆ ಸಲ್ಲಿಸತಕ್ಕದ್ದು.

14. ವಿನ್ಯಾಸ ಅನುಮೋದನೆಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(4) ಮತ್ತು ಕಲಂ 73 ರಡಿಯಲ್ಲಿ ಕ್ರಮಕೈಗೊಳ್ಳಲಾಗುವುದು.


ಸಹಿ/-
ಆಯುಕ್ತರು(ಅ.ಪ್ರ)
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಬಳ್ಳಾಪುರ.

ಯಥಾ ಪ್ರತಿಯನ್ನು:-


1. ಶ್ರೀ ವಿಜಯ ಕುಮಾರ್.ಜಿ.ಎಂ ಬಿನ್ ಜಿ.ಮುನಿರತ್ನಂ, ಗರ್ಲ್ಸ್ ಸ್ಕೂಲ್ ರಸ್ತೆ, ಅರಳೇಪೇಟೆ, ಚಿಕ್ಕಬಳ್ಳಾಪುರ ಇವರಿಗೆ ಮಾಹಿತಿಗಾಗಿ ನೀಡಲಾಗಿದೆ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಗಲಗುರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಇವರಿಗೆ ವಾಣಿಜ್ಯ ಏಕನಿವೇಶನ ವಿನ್ಯಾಸ ನಕ್ಷೆಯನ್ನು ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ನೀಡಲಾಗಿದೆ.
3. ಉಪ-ನೋಂದಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಗೆ ಮಾಹಿತಿಗಾಗಿ ನೀಡಲಾಗಿದೆ.
4. ಕಛೇರಿ ಕಡತಕ್ಕೆ.

23/11/22
ಆಯುಕ್ತರು(ಅ.ಪ್ರ)
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಬಳ್ಳಾಪುರ.

ಷರಾ: ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದೃಡೀಕರಿಸಿ ನೀಡಿರುವ ಸರ್ವೆ ನಕ್ಷೆಗೆ ಅನುಗುಣವಾಗಿ ವಿನ್ಯಾಸ ನಕ್ಷೆಯನ್ನು ತಯಾರಿಸಲಾಗಿದೆ.



ಎಲ್ಲಾ ಅಳತೆಗಳು ಮೀಟರ್‌ಗಳಲ್ಲಿ



ಪ್ರಸ್ತಾವಿತ ಪ್ರದೇಶದ ಒಟ್ಟು ವಿಸ್ತೀರ್ಣ 0ಎಕರೆ–10ಗುಂಟೆ

ಭೂ–ಉಪಯೋಗ ವಿಶ್ಲೇಷಣೆ

ಕ್ರ.ಸಂ.	ಭೂ–ಉಪಯೋಗ	ವಿಸ್ತೀರ್ಣ(ಚ.ಮೀ)	ಶೇಕಡ (%)
01	ವಾಣಿಜ್ಯ	804.32	79.50
02	ಉದ್ಯಾನವನ	101.57	10.04
03	ವಾಹನ ನಿಲುಗಡೆ	50.61	05.00
04	ರಸ್ತೆ	55.20	05.46
ಒಟ್ಟು		1011.70	100.00

ಈ ಪ್ರಾಧಿಕಾರದ ಪತ್ರ ಸಂಖ್ಯೆ:ಚಿನಅಪ್ರಾ:ಚಿಬ:ವಿನ್ಯಾಸ: 02/22–23 ದಿನಾಂಕ 23 –11 –2022ರಲ್ಲಿ ನಮೂದಿಸಿದ ನಿಬಂಧನೆಗಳಿಗೆ ಒಳಪಟ್ಟು ಈ ವಾಣಿಜ್ಯ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದಿಸಿದೆ

ಕರ್ನಾಟಕ ಸರ್ಕಾರ

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,

ಚಿಕ್ಕಬಳ್ಳಾಪುರ.

23/11/2022
ನಗರ ಯೋಜಕ ಸದಸ್ಯರು(ಪ್ರ)
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ

23/11/22
ಆಯುಕ್ತರು,(ಅ.ಪ್ರ)
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ

ಪೀಠಿಕೆ: ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕು ನಂದಿ ಹೋಬಳಿ ಚೆಲುವತಿಮ್ಮನಹಳ್ಳಿ ಗ್ರಾಮದ ಸರ್ವೆ ನಂ 65/14 ರಲ್ಲಿ 0ಎಕರೆ–05ಗುಂಟೆ ಮತ್ತು ಸರ್ವೆ ನಂ 65/13 ರಲ್ಲಿ 0ಎಕರೆ–05ಗುಂಟೆ ಒಟ್ಟು 0ಎಕರೆ–10ಗುಂಟೆ ವಿಸ್ತೀರ್ಣದ ಭೂಪರಿವರ್ತಿತ ಪ್ರದೇಶಕ್ಕೆ ರಚಿಸಲಾದ ವಾಣಿಜ್ಯ ಏಕ ನಿವೇಶನ ವಿನ್ಯಾಸ ನಕ್ಷೆ.

ಅರ್ಜಿದಾರರು: ಶ್ರೀ ವಿಜಯ ಕುಮಾರ್.ಜಿ.ಎಂ ಬಿನ್ ಜಿ.ಮುನಿರತ್ನಂ

ಅಳತೆ:–1:400

ನಕ್ಷೆ ಸಂಖ್ಯೆ: 02/2022–23